



ಸಂಪುಟ–3 | ಸಂಚಿಕೆ 11 | 5115/ವಿಜಯ ಸಂ | ಪುಷ್ಯ/ಜನವರಿ 2014 | ಪುಟಗಳು : 8


# ಪ್ರತಿಭಾ ದಿನೋತ್ಸವ

**07–12–2013**

ಶ್ರೀರಾಮ ವಿದ್ಯಾಕೇಂದ್ರದ ಪ್ರಾಥಮಿಕ ಶಾಲಾ ವಿಭಾಗದಿಂದ ಪದವಿಪೂರ್ವ ವಿಭಾಗದವರೆಗಿನ ಪ್ರತಿಭಾ ದಿನೋತ್ಸವ ಮಧುಕರ ಸಭಾಂಗಣದಲ್ಲಿ ನಡೆಯಿತು.

ಸಂಜೆ 6ರಿಂದ ರಾತ್ರಿ ಸುಮಾರು 12–30ರ ವರೆಗೆ ಭರತ ನಾಟ್ಯ, ಜನಪದ ನೃತ್ಯ, ಪೌರಾಣಿಕ, ಸಾಮಾಜಿಕ ಹಾಗೂ ಐತಿಹಾಸಿಕ ನಾಟಕಗಳು ಸಂಸ್ಕೃತ ಭಾಷೆಯಲ್ಲಿ ರೂಪಕಗಳು, ಮೂಕಾಭಿನಯ, ಮೋಹಿನಿಯಾಟ್ಟಂ, ನವಿಲು ನೃತ್ಯ, ಕೊರಿಯಾ ದೇಶದ ನೃತ್ಯ, ಮೇಘಾಲಯದ ಜಾನಪದ ನೃತ್ಯ, ಬೀಸು ಕಂಸಾಳೆ, ವೀರಗಾಸೆ ಮುಂತಾದ ಹಲವಾರು ನೃತ್ಯ ಪ್ರಕಾರಗಳಿಗೆ ಮಧುಕರ ಸಮುಚ್ಚಯದ ಮೈಸೂರು ಗೋವಿಂದ ರಾವ್ ಸಭಾಭವನದ ವೇದಿಕೆ ಸಾಕ್ಷಿಯಾಯಿತು.

ಕೊನೆಯಲ್ಲಿ ನಡೆದ ಪ್ರಾಥಮಿಕ ಬಾಲಕ–ಬಾಲಕಿಯರ ಯಕ್ಷಗಾನ "ಯಜ್ಞ ಸಂರಕ್ಷಣೆ" ಎಲ್ಲರ ಮನರಂಜಿಸಿದರೆ, ಪ್ರೌಢ– ಪದವಿಪೂರ್ವ ವಿಭಾಗದ ಬಾಲಕರ ಯಕ್ಷಗಾನ "ಶಾಂಭವಿ ವಿಜಯ"ವು ಶಿಕ್ಷಕರ ಪರಿಶ್ರಮ–ವಿದ್ಯಾರ್ಥಿಗಳ ಪ್ರತಿಭೆಯನ್ನು ಅನಾವರಣಗೊಳಿಸಿತು.

ಸಂಸ್ಥೆಯ ಸಂಚಾಲಕರು, ಅಧ್ಯಕ್ಷರು, ಶಿಕ್ಷಕರು ಹಾಗೂ ಪೋಷಕರು ಉಪಸ್ಥಿತರಿದ್ದು ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡಿದರು.

ಅಂದು ಮುಂಜಾನೆಯಿಂದ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ವಿಭಾಗಗಳಲ್ಲಿ ನಡೆದ ಬೇರೆ ಬೇರೆ ಕ್ರೀಡಾ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜಯಗಳಿಸಿದ ಹಾಗೂ ಕಳೆದ ಶೈಕ್ಷಣಿಕ ವರ್ಷದಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತರನ್ನು ಸನ್ಮಾನಿಸುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ನಡೆದವು.

(ವಿವರ ಒಳಪುಟಗಳಲ್ಲಿ)



ಭರತನಾಟ್ಯ



ಯಕ್ಷಗಾನ–
ಶಾಂಭವಿ ವಿಜಯ





ಸಂಸ್ಕೃತ ಕಿರುಪ್ರಹಸನ



ಸಾಮಾಜಿಕ ನಾಟಕ





ಪೌರಾಣಿಕ ನಾಟಕ



ವೀರಗಾಸೆ


ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ.) ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, ದ. ಕ. 574 222. ದೂ.: 08255–275183
E-mail : info@srvk.org Website : www.srvk.org Fax : 08255-275183

# ಕಾಣದ ಕರೆ

ಚಿಂತನರಶ್ಮಿ

ಒಂದು ಬಾರಿ ಟೆಲಿಗ್ರಾಫ್ ಆಪರೇಟರ್ ಹುದ್ದೆಗೆ ಜಾಹೀರಾತು ನೀಡಲಾಗಿತ್ತು. ನೂರಾರು ಜನ ಯುವಕ, ಯುವತಿಯರು ಆ ಹುದ್ದೆಯನ್ನು ಬಯಸಿ ಸಂದರ್ಶನಕ್ಕೆ ಬಂದಿದ್ದರು. ಅವರನ್ನೆಲ್ಲಾ ಒಂದು ದೊಡ್ಡ ಕೊಠಡಿಯಲ್ಲಿ ಕೂಡಿಸಲಾಗಿತ್ತು. ಅದರ ಪಕ್ಕದ ಕೊಠಡಿಯಲ್ಲಿ ಸಂದರ್ಶನ ನಡೆಸುವ ಅಧಿಕಾರಿಗಳು ಕುಳಿತಿದ್ದರು. ಎಲ್ಲರೂ ತಮ್ಮ ತಮ್ಮ ಸರದಿಗಾಗಿ ಕಾಯುತ್ತಿದ್ದರು. ಅದು ಏತಕ್ಕೋ ಯಾರನ್ನೂ ಒಳಗೆ ಕರೆದಿರಲಿಲ್ಲ. ಗುಂಪು ಗುಂಪಾಗಿ ಕುಳಿತ ಅಭ್ಯರ್ಥಿಗಳು ತಮ್ಮ ಸಾಧನೆಗಳನ್ನು ಹಂಚಿಕೊಳ್ಳುತ್ತಿದ್ದರು. ಇನ್ನೂ ಏತಕ್ಕೆ ಯಾರನ್ನೂ ಸಂದರ್ಶನಕ್ಕೆ ಕರೆಯಲಿಲ್ಲ ಎಂದು ಚಡಪಡಿಸುತ್ತಿದ್ದರು. ಈ ದೊಡ್ಡ ಕೊಠಡಿಯ ಒಂದು ಮೂಲೆಯಲ್ಲಿ ಒಂದು ಟೆಲಿಗ್ರಾಫ್ ಯಂತ್ರವಿತ್ತು. ಅದು ಏನೋ ಸಪ್ಪಳವನ್ನು ಮಾಡುತ್ತಲೇ ಇತ್ತು. ಒಂದೇ ಸಮ ಕಿರಿಕಿರಿ ಮಾಡುವ ಸದ್ದು. ಹತ್ತಿರ ಕುಳಿತವರ ಮಾತಿಗೂ ತೊಂದರೆ ಮಾಡುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಯಾರೂ ಅದರ ಕಡೆಗೆ ಗಮನವನ್ನು ನೀಡಲಿಲ್ಲ.

ಒಬ್ಬ ಯುವಕ ಎದ್ದು ನಿಂತು ಈ ಕಡೆಗೆ ನೋಡಿ ಸಂದರ್ಶನದ ಕೊಠಡಿಯೊಳಗೆ ಹೋದ. ಉಳಿದವರಿಗೆಲ್ಲ ಆಶ್ಚರ್ಯ. ತಾವು ಅವನಿಗಿಂತ ಮೊದಲಿಗೆ ಬಂದವರು ತಮ್ಮನ್ನೇಕೆ ಕರೆಯಲಿಲ್ಲ ಎಂದು ಕೆಲವರೆಂದರೆ, ಅಂತೂ ಸಂದರ್ಶನ ಪ್ರಾರಂಭವಾಯಿತಲ್ಲ, ತಮ್ಮ ಬಾರಿಯೂ ಬರುತ್ತದೆ ಎಂದು ಕೊಂಡವರು ಕೆಲವರು. ಸ್ವಲ್ಪ ಹೊತ್ತಿನ ನಂತರ ಒಳಗೆ ಹೋದ ಯುವಕ ನಗುನಗುತ್ತಾ ಹೊರಗೆ ಬಂದ. ಕುಳಿತವರನ್ನೆಲ್ಲ ನೋಡಿ ಹೇಳಿದ. “ಸ್ನೇಹಿತರೇ, ನೀವು ಇಲ್ಲಿ ಕುಳಿತಿರುವುದರಲ್ಲಿ ಏನೂ ಅರ್ಥವಿಲ್ಲ. ಇದ್ದದ್ದು ಒಂದೇ ಹುದ್ದೆ. ಅದನ್ನು ನನಗೆ ಕೊಟ್ಟಾಯಿತು”. ಎಲ್ಲ ಅಭ್ಯರ್ಥಿಗಳಿಗೆ ಕೋಪ ಬಂದಿತು. ಕೂಗಾಡತೊಡಗಿದರು. ಆಗ ಒಳಗಿದ್ದ ಅಧಿಕಾರಿ ಒಂದು ವಿವರಣೆ ನೀಡಿದ. “ನೋಡಿ, ನೀವೆಲ್ಲ ಇಲ್ಲಿ ಬಂದದ್ದು ಟೆಲಿಗ್ರಾಫ್ ಆಪರೇಟರ್ ಹುದ್ದೆಗೆ ಅಲ್ಲವೇ? ಆದರೆ ನಿಮಗಾರಿಗೂ ಅದರಲ್ಲಿ ಆಸಕ್ತಿ ಇಲ್ಲವೆಂದು ತೋರುತ್ತದೆ. ಆ ಮೂಲೆಯಲ್ಲಿದ್ದ ಟೆಲಿಗ್ರಾಫ್ ಯಂತ್ರ ಮಾಡುತ್ತಿದ್ದ ಸದ್ದನ್ನು ಯಾರೂ ಕೇಳಿಸಿಕೊಳ್ಳಲಿಲ್ಲ. ನಾನು ಒಳಗಿನಿಂದ ಸಂದೇಶ ಕಳುಹಿಸಿದೆ. “ಯಾರಾದರೂ ಸಂದರ್ಶನಕ್ಕೆ ಸಿದ್ಧರಿದ್ದರೆ ಒಳಗೆ ಬನ್ನಿ” ಎಂದು. ಆ ಯುವಕನೊಬ್ಬನೇ ಕೇಳಿಸಿಕೊಂಡ, ಒಳಗೆ ಬಂದ. ಅವನಿಗೆ ಹುದ್ದೆ ದೊರೆಯಿತು.”

ನಮ್ಮೆಲ್ಲರ ಜೀವನದಲ್ಲೂ ಇಂತಹ ಸೂಚನೆಗಳು, ಸಂದೇಶಗಳು ಬರುತ್ತಲೇ ಇರುತ್ತವೆ. ಗಮನಿಸಿ ಕಾರ್ಯ ಪ್ರವೃತ್ತರಾದವರು ಯಶಸ್ವಿಗಳಾಗುತ್ತಾರೆ. ಉಳಿದವರು ನೋಡುತ್ತಲೇ ಇರುತ್ತಾರೆ. ■

## ಶಿಶುಮಂದಿರ

**ಸೇವಾದಿನ (ಶ್ರೀರಾಮ ಶಿಶುಮಂದಿರ)**

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶ್ರೀರಾಮ ಶಿಶುಮಂದಿರದಲ್ಲಿ ಅಜಿತ್ ಕುಮಾರರ ಪುಣ್ಯ ತಿಥಿಯ ನಿಮಿತ್ತ ವಿವಿದೆಡೆ ಸೇವಾದಿನವನ್ನು ಆಚರಣೆ ಮಾಡಲಾಯಿತು.

**ಕಶೆಕೋಡಿ ಮಾತೃಮಂಡಳಿ : 18–12–2013**

ಕಶೆಕೋಡಿ ಮಾತೃಮಂಡಳಿಯಲ್ಲಿ ಸೇವಾದಿನದ ಪ್ರಯುಕ್ತ 1 ಗಂಟೆಗಳ ಕಾಲ ಭಜನಾ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಸಾವಿತ್ರಿ ವಸಂತಮಾಧವ ಇವರು ಅಜಿತ್‌ಕುಮಾರರ ಬಗ್ಗೆ ಮಾತೆಯರಿಗೆ ತಿಳಿಸಿಕೊಟ್ಟರು. ಒಟ್ಟು 13 ಮಾತೆಯರು ಭಾಗವಹಿಸಿದ್ದರು.

**ಕಲ್ಲಡ್ಕ ಶಿಶುಮಂದಿರ : 19–12–2013**

ಶ್ರೀರಾಮ ಶಿಶುಮಂದಿರದಲ್ಲಿ ಸೇವಾದಿನವನ್ನು ಆಚರಣೆ ಮಾಡಲಾಯಿತು. ಅಂದು ಮಕ್ಕಳು ಬೆಳಿಗ್ಗೆ ಶಿಶುಮಂದಿರ ಹಾಗೂ ಪ್ರಾಥಮಿಕ ಶಾಲೆಯ ಸುತ್ತಮುತ್ತ ಕಸಕಡ್ಡಿಗಳನ್ನು ಹೆಕ್ಕಿ ಸ್ವಚ್ಛತೆಯನ್ನು ಮಾಡಿದರು. ನಂತರ ಶಿಶುಮಂದಿರದ ಗಂಗಾಮಾತಾಜಿ ಇವರು ಮಕ್ಕಳಿಗೆ ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು.

**ಕಲ್ಲಡ್ಕ ಮಾತೃಮಂಡಳಿ : 20–12–2013**

ಶ್ರೀರಾಮ ಶಿಶುಮಂದಿರದ ಮಾತೃಮಂಡಳಿಯಲ್ಲಿ ಸೇವಾದಿನದ ಪ್ರಯುಕ್ತ ಭಜನಾ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಪನಿಪಾ ಮಾಣಿ ಇವರು ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು.

**ಕಲ್ಲಡ್ಕ ಬಾಲಕಿಯರ ವಸತಿನಿಲಯ : 21–12–2013**

ಸೇವಾ ದಿನದ ಪ್ರಯುಕ್ತ ರಸಪ್ರಶ್ನೆ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಸುಧಾಭಟ್ ಇವರು ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು. ಒಟ್ಟು 45 ಮಕ್ಕಳು ಭಾಗವಹಿಸಿದ್ದರು.

**ನೆಟ್ಲ–ಅಮ್ಟೂರು ಬಾಲಗೋಕುಲ : 22/12/2013**

ಸೇವಾದಿನದ ಪ್ರಯುಕ್ತ ಹೊರಸಂಚಾರ ನರಹರಿ ಪರ್ವತಕ್ಕೆ ಕರೆದುಕೊಂಡು ಹೋಗಲಾಯಿತು. ಅಲ್ಲಿಂದ ನೆಟ್ಲ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ 1 ಗಂಟೆಗಳ ಕಾಲ ಶ್ರಮದಾನವನ್ನು ಮಾಡಿದರು. ಶ್ರೀಮತಿ ಮಲ್ಲಿಕಾ ಶೆಟ್ಟಿ ಇವರು ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು. ಒಟ್ಟು 30 ಮಕ್ಕಳು ಭಾಗವಹಿಸಿದ್ದರು.

**ಪಾಣೆಮಂಗಳೂರು ಬಾಲಕಿಯರ ವಸತಿ ನಿಲಯದಲ್ಲಿ**

ಸೇವಾದಿನದ ಪ್ರಯುಕ್ತ ರಸಪ್ರಶ್ನೆ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಪನಿಪಾ ಮಾಣಿ ಇವರು ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು. ಒಟ್ಟು 45 ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಒಟ್ಟು 6 ಕಡೆಗಳಲ್ಲಿ ಕಾರ್ಯಕ್ರಮ ಮಾಡಲಾಯಿತು.

**ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು : 27/12/2013**

ಸೇವಾ ದಿನದ ಪ್ರಯುಕ್ತ ಶ್ರೀಮತಿ ಆಶಾ ರಾಮಯಕೋಡಿ(ಮಠ) ಇವರ ಮನೆಯಲ್ಲಿ ಭಜನಾ ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಡಾ॥ ಕಮಲಾ ಪ್ರಭಾಕರ ಭಟ್ ಇವರು ಸೇವಾದಿನದ ಉದ್ದೇಶ ಮತ್ತು ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು. ಶ್ರೀರಾಮ ಶಿಶುಮಂದಿರದ ಗಂಗಾ ಮಾತಾಜಿ ಉಪಸ್ಥಿತರಿದ್ದರು. ಈ ಭಜನಾ ಕಾರ್ಯಕ್ರಮದಲ್ಲಿ ಒಟ್ಟು 25 ಜನರು ಭಾಗವಹಿಸಿದ್ದರು.

**ಗೋಕುಲೋತ್ಸವ : 25–12–2013**

ಸೇವಾ ಭಾರತಿ ಟ್ರಸ್ಟ್ ಬಂಟ್ವಾಳ ತಾಲೂಕು


**“ಸರಯೂ” ಸಂಪಾದಕ ಮಂಡಳಿ :**

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :** ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ

**ಸಹಸಂಪಾದಕರು :** ದಿವ್ಯಾಕುಮಾರಿ, ಸುಮಿತ್ರಾ ಎಸ್.ಜಿ., ಅನಿತಾ, ಮಹೇಶ ನೆಟ್ಲ, ಜ್ಯೋತಿ, ಜಯಾನಂದ ಪೆರಾಜೆ

**ವ್ಯವಸ್ಥಾಪಕ ಸಂಪಾದಕರು :** ಸತೀಶ ಭಟ್, ಶಿವಗಿರಿ **ಕಾರ್ಯನಿರ್ವಾಹಕ ಸಂಪಾದಕರು :** ಕೃಷ್ಣಪ್ರಸಾದ ಕಾಯರ್‌ಕಟ್ಟೆ **ವಿನ್ಯಾಸ :** ಕುಶಾಲಪ್ಪ ಅಮ್ಟೂರು

ಅಜ್ಜಿಬೆಟ್ಟು ಶಾಲಾ ಮೈದಾನದಲ್ಲಿ ತಾಲೂಕಿನ ಎಲ್ಲಾ ಬಾಲಗೋಕುಲಗಳ ಸಮ್ಮಿಲನದೊಂದಿಗೆ ಗೋಕುಲೋತ್ಸವ ಕಾರ್ಯಕ್ರಮ ನಡೆಯಿತು.

ಗೋಕುಲೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಅಕ್ಕಮಹಾದೇವಿ ಶಿಶುಮಂದಿರದ ಮೂಲಕ ನಡೆಯುವ ಬಾಲಗೋಕುಲದ ಮಕ್ಕಳು ಎಲ್ಲಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಹಾಗೂ ಅದೇ ದಿನ ಸಂಜೆ ಅಜ್ಜಿಬೆಟ್ಟು ಶಾಲಾ ಮೈದಾನದಿಂದ ಬಿ.ಸಿ.ರೋಡ್‌ನ ರಂಗಮಂದಿರದ ತನಕ ಶೋಭಾಯಾತ್ರೆಯಲ್ಲಿ 21 ಬಾಲಗೋಕುಲದ ಮಕ್ಕಳು ವಿವೇಕಾನಂದ ವೇಷಧಾರಿಗಳಾಗಿ ಪಾಲ್ಗೊಂಡಿದ್ದರು.

### ಶ್ರೀಕೃಷ್ಣ ಶಿಶುಮಂದಿರ ಸಜೀಪ

- ದಿನಾಂಕ 21/12/2013 ಶನಿವಾರದಂದು ಬಾಲಗೋಕುಲದ ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಮಾಡಲಾಯಿತು. ಚಂದ್ರಕಲಾ ಮಾತಾಜಿ ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು. ಒಟ್ಟು 13 ಮಕ್ಕಳು ಭಾಗವಹಿಸಿದ್ದರು.
- ದಿನಾಂಕ 23/12/2013 ಸೋಮವಾರದಂದು ಸೇವಾದಿನದ ಪ್ರಯುಕ್ತ ಶಿಶುಮಂದಿರದಲ್ಲಿ ಭಜನಾಕಾರ್ಯಕ್ರಮವನ್ನು ಮಾಡಲಾಯಿತು. ಶ್ರೀಮತಿ ಮಲ್ಲಿಕಾ ಶೆಟ್ಟಿ ಇವರು ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು. ಒಟ್ಟು 6 ಮಾತೆಯರು 18 ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### ಶ್ರೀಗಣೇಶ ಶಿಶುಮಂದಿರ ಬೊಂಡಾಲ

- ದಿನಾಂಕ 24/12/2013 ಮಂಗಳವಾರ ಸೇವಾದಿನದ ಪ್ರಯುಕ್ತ ಬೊಂಡಾಲ ಪ್ರಾಥಮಿಕ ಶಾಲೆ ಮತ್ತು ಶಿಶುಮಂದಿರದ ಸುತ್ತಮುತ್ತ ಸ್ವಚ್ಛತೆಯನ್ನು ಮಾಡಲಾಯಿತು. 26 ಮಕ್ಕಳು ಭಾಗವಹಿಸಿದ್ದರು. ಬೊಂಡಾಲದ ಮಮತಾ ಮಾತಾಜಿ ಇವರು ಅಜಿತ್‌ಕುಮಾರರ ಬಗ್ಗೆ ತಿಳಿಸಿಕೊಟ್ಟರು.
- ದಿನಾಂಕ 22/12/2013 ಭಾನುವಾರದಂದು ಸೇವಾದಿನದ ಪ್ರಯುಕ್ತ ನೆಟ್ಲ ದೇವಸ್ಥಾನದಲ್ಲಿ ಶ್ರಮದಾನವನ್ನು ಮಾಡಲಾಯಿತು. ಒಟ್ಟು 15 ಮಾತೆಯರು 10 ಪುರುಷರು ಭಾಗವಹಿಸಿದ್ದರು.

## ಪ್ರಾಥಮಿಕ ಶಾಲೆ

### ಪ್ರತಿಭಾ ಪುರಸ್ಕಾರ




ಶ್ರೀರಾಮ ಶಾಲಾ ಪ್ರಾಥಮಿಕ ವಿಭಾಗದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ವೇದವ್ಯಾಸ ಧ್ಯಾನ ಮಂದಿರದಲ್ಲಿ ಶುಕ್ರವಾರದಂದು(06-12-2013) ನಡೆಯಿತು. ಕ್ರೀಡೆ ಮತ್ತು ಬೌದ್ಧಿಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಅತಿಥಿಗಳು ಬಹುಮಾನ ನೀಡಿ ಪುರಸ್ಕರಿಸಿದರು.

ಅತಿಥಿಗಳಾಗಿ ಬಂಟ್ವಾಳದ ಹಿರಿಯ ನ್ಯಾಯವಾದಿಯಾದ ಶ್ರೀಯುತ ರಾಮಣ್ಣ ಗೌಡ ಮಾತನಾಡಿ ಮಗು ಏನೂ ತಿಳಿಯದ ಮಣ್ಣಿನ ಮುದ್ದೆಯಾಗಿರುತ್ತದೆ. ಅದಕ್ಕೆ ಕೈ ಕಾಲು ಎಲ್ಲಾ ನೀಡಿ ಸುಂದರ ಮೂರ್ತಿಯನ್ನಾಗಿ ನಿರ್ಮಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವವಾದದ್ದು ಇಲ್ಲಿನ ಮಕ್ಕಳ ಸಂಸ್ಕಾರ, ಶಿಸ್ತು ನೋಡಿದರೆ ಎಲ್ಲಿಲ್ಲದ ಆನಂದವಾಗುತ್ತದೆ ಎಂದು ಹೇಳಿ ಶುಭ ಹಾರೈಸಿದರು.

ತದನಂತರ ಮಾತನಾಡಿದ ನಿಟಿಲಾಪುರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರಾದ ಎ.ಎಸ್.ಭಟ್, ವಿದ್ಯಾರ್ಥಿ ಜೀವನ ಅತ್ಯಂತ ಪ್ರಮುಖವಾದ ಘಟ್ಟ. ಈ ಘಟ್ಟದಲ್ಲಿ ಒಳ್ಳೆಯ ವಿಚಾರಗಳನ್ನು ಕಲಿತುಕೊಳ್ಳಬೇಕು ಎಂದು ಹೇಳಿ ಶುಭ ಹಾರೈಸಿದರು.

ಶಿಕ್ಷಣ ಇಲಾಖೆಯ ಕಲ್ಲಡ್ಕ ಕ್ಲಸ್ಟರ್‌ನ ಸಿ.ಆರ್.ಪಿಯಾದ ಶ್ರೀಯುತ ನಾಗರಾಜ್ ಮಾತನಾಡಿ ಶಿಕ್ಷಣ ಎನ್ನುವುದು ಕೇವಲ ಓದುವುದು, ಬರೆಯುವುದು ಮಾತ್ರವಲ್ಲ ಸಹಪಠ್ಯ ಚಟುವಟಿಕೆಯಲ್ಲಿಯೂ ಸಾಧನೆ ಮಾಡಬೇಕು ಎಂದು ಹೇಳಿ ಶುಭ ಹಾರೈಸಿದರು.

ವೇದಿಕೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀಯುತ ನಾರಾಯಣ ಸೋಮಯಾಜಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಶಿವಗಿರಿ ಸತೀಶ್ ಭಟ್, ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

ವಿಜೇತ ವಿದ್ಯಾರ್ಥಿಗಳ ಪಟ್ಟಿಯನ್ನು ಶ್ರೀಮತಿ ಸೌಮ್ಯ ಮಾತಾಜಿ ಮತ್ತು ಹರೀಶ್ ಶ್ರೀಮಾನ್ ವಾಚಿಸಿದರು. ಕಾರ‍್ಯಕ್ರಮಕ್ಕೆ ರೇಖಾ ಮಾತಾಜಿ ನಿರೂಪಿಸಿ, ಶಿವಗಿರಿ ಸತೀಶ್ ಭಟ್ ಸ್ವಾಗತಿಸಿ, ರವಿರಾಜ್ ಶ್ರೀಮಾನ್ ವಂದಿಸಿದರು.

### ಶೈಕ್ಷಣಿಕ ಪ್ರವಾಸ



ಪ್ರಾಥಮಿಕ ಶಾಲೆಯ 5, 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸವು ದಿನಾಂಕ 24.12.2013 ರಂದು ಹಮ್ಮಿಕೊಳ್ಳಲಾಯಿತು. ಇದರಲ್ಲಿ 101 ವಿದ್ಯಾರ್ಥಿಗಳು ಮತ್ತು 14 ಶಿಕ್ಷಕರು ಭಾಗವಹಿಸಿ ಆನೆಗುಡ್ಡೆಯ ವಿನಾಯಕ ದೇವಸ್ಥಾನ, ಕುಂಭಾಶಿಯ ಮಹಾಲಿಂಗೇಶ್ವರ ದೇವಸ್ಥಾನ ಮತ್ತು ಸೂರ್ಯದೇವಸ್ಥಾನ, ಕೊಲ್ಲೂರು ಶ್ರೀ ಮೂಕಾಂಬಿಕ ದೇವಸ್ಥಾನ, ಇಡಗುಂಜಿಯ ಗಣಪತಿ ದೇವಸ್ಥಾನ, ಮುರುಡೇಶ್ವರ ದೇವಸ್ಥಾನ ಮತ್ತು ಕಡಲ ಕಿನಾರೆಯನ್ನು ವೀಕ್ಷಿಸಿದರು.

### ಪ್ರತಿಭಾ ಕಾರಂಜಿ

ದಿನಾಂಕ 03.12.2013ರಂದು ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯು ಇನ್‌ಫೆಂಟ್ ಜೀಸಸ್ ಕನ್ನಡ ಮಾಧ್ಯಮ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಮೊಡಂಕಾಪು ಇಲ್ಲಿ ನಡೆಯಿತು. ಕ್ಲಸ್ಟರ್ ಮಟ್ಟದಲ್ಲಿ ಆಯ್ಕೆಗೊಂಡ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಕೆಲವೊಂದು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದರು.

ಬಹುಮಾನದ ವಿವರ

* ಮೇದಿನಿ.ಹೆಚ್- ಕನ್ನಡ ಕಂಠಪಾಠ- ಪ್ರಥಮ
* ಮಧುಶ್ರೀ- ಸಂಸ್ಕೃತ ಧಾರ್ಮಿಕ ಪಠಣ- ಪ್ರಥಮ
* ಯುಕಿದಾಮೆ- ಕ್ಲೇ ಮಾಡೆಲಿಂಗ್- ಪ್ರಥಮ
* ನಿವೇದಿತಾ- ಸಂಸ್ಕೃತ ಕಂಠಪಾಠ- ದ್ವಿತೀಯ
* ನಿಶಾಂತ್ ಕೃಷ್ಣ- ಸಂಸ್ಕೃತ ಧಾರ್ಮಿಕ ಪಠಣ- ದ್ವಿತೀಯ
* ಹರ್ಷಿತಾ-ಕಥೆ ಹೇಳುವುದು- ತೃತೀಯ
* ಅನಘಾ-ಸಂಸ್ಕೃತ ಕಂಠಪಾಠ- ತೃತೀಯ
* ನಿವೇದಿತಾ ಮತ್ತು ತಂಡ- ಜನಪದ ನೃತ್ಯ- ದ್ವಿತೀಯ
* ಮೇದಿನಿ ಮತ್ತು ತಂಡ- ಕೋಲಾಟ - ದ್ವಿತೀಯ
*ಮಧುಶ್ರೀ ಮತ್ತು ತಂಡ- ದೇಶಭಕ್ತಿಗೀತೆ- ದ್ವಿತೀಯ



## ಕ್ರೀಡಾಕೂಟ:

ಬಿಷಾರ್‌ಲಾಂಗ್ 8 ಕಣ್ಣಗಿ ತರಗತಿ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 80ಮೀ ಅಡತಡೆ ಓಟ, 400ಮೀ ಓಟ, 200ಮೀ ಓಟದಲ್ಲಿ ಪ್ರಥಮ ಸ್ಥಾನ ಪಡೆದು ವೈಯಕ್ತಿಕ ಚಾಂಪಿಯನ್‌ಯಾಗಿರುತ್ತಾನೆ.

ಥಂಬಾರ್‌ಷಾಯೋ 10 ಆಜಾದ್ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 100ಮೀ ಅಡೆ ತಡೆ ಓಟ, 100ಮೀ ಓಟದಲ್ಲಿ ಪ್ರಥಮ ಸ್ಥಾನ, ಉದ್ದಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದು ವೈಯಕ್ತಿಕ ಚಾಂಪಿಯನ್ ಪಡೆದು ಜಿಲ್ಲಾ ಮಟ್ಟದಲ್ಲಿ 100ಮೀ ಅಡೆತಡೆ ಓಟದಲ್ಲಿ ದ್ವಿತೀಯ, 100ಮೀ ಓಟದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾನೆ. ಹರ್ಡಲ್ಸ್‌ನಲ್ಲಿ ಪ್ರಾಂತ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು S.G.F.I ರಾಷ್ಟ್ರೀಯ ಕ್ರೀಡಾಕೂಟ(ರಾಂಚಿ)ದಲ್ಲಿ ಭಾಗವಹಿಸಿರುತ್ತಾನೆ.

ಹರ್ಷಿತ್ ವಿ. 10 ಭರತ ಇಲಾಖಾ ಕ್ರೀಡಾಕೂಟದ ತಾಲೂಕು ಮಟ್ಟದಲ್ಲಿ ಕೋಲು ಜಿಗಿತದಲ್ಲಿ ಪ್ರಥಮ, ವಿದ್ಯಾಭಾರತಿಯ ಪ್ರಾಂತ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿರುತ್ತಾನೆ.

ದೀಕ್ಷಿತಾ 10 ಆಜಾದ್ 100ಮೀ ಹರ್ಡಲ್ಸ್‌ನಲ್ಲಿ ಇಲಾಖಾ ಕ್ರೀಡಾಕೂಟದ ತಾಲೂಕು ಮಟ್ಟದಲ್ಲಿ ಪ್ರಥಮ ಹಾಗೂ ವಿದ್ಯಾಭಾರತಿಯ ಪ್ರಾಂತ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.

ತಾಲೂಕು ಮಟ್ಟದ ಇಲಾಖಾ ಕೀಡಾಕೂಟದಲ್ಲಿ ಹರ್ಷಿತಾ 10ಆ ಎತ್ತರ ಜಿಗಿತ ಪ್ರಥಮ, ಹರ್ಷಿಕಾ 10ವಿ 400ಮೀ ಓಟ ಪ್ರಥಮ, ಸ್ಮಿತಾ 10ವಿ 100ಮೀ ಅಡೆತಡೆ ಓಟ ತೃತೀಯ ಸ್ಥಾನ ಪಡೆದಿರುತ್ತಾರೆ.

4*100ಮೀ ರಿಲೇಯಲ್ಲಿ 17ರ ವಯೋಮಾನದ ಬಾಲಕರ ತಂಡ ಪ್ರಥಮ ಸ್ಥಾನ, ಬಾಲಕಿಯರ ತಂಡ ದ್ವಿತೀಯ ಸ್ಥಾನ, ಮತ್ತು 14ರ ವಯೋಮಾನದ ಬಾಲಕರ ತಂಡ ತೃತೀಯ ಸ್ಥಾನ ಪಡೆದಿದೆ.

## ವಿಕಲಚೇತನರ ಕ್ರೀಡಾಕೂಟ




ದಿನಾಂಕ 24.12.2013ರಂದು ಬಂಟ್ವಾಳ ಎಸ್.ವಿ.ಎಸ್.ಪ್ರೌಢಶಾಲಾ ಕ್ರಿಡಾಂಗಣದಲ್ಲಿ ಜರಗಿದ ದ.ಕ. ಜಿಲ್ಲಾ ಮಟ್ಟದ ವಿಕಲ ಚೇತನ ಕ್ರೀಡಕೂಟದಲ್ಲಿ ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ 9ನೇ ತರಗತಿಯ ಗಗನ್‌ದೀಪ್ ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಹಾಗೂ ಈಟಿ ಎಸೆತದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾನೆ. 8ನೇ ತರಗತಿಯ ಅಶ್ವತ್ಥ್ ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾನೆ.

## ಜಿಲ್ಲೆಯಿಂದ ಪ್ರಾಂತಕ್ಕೆ ಆಯ್ಕೆ

ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆಯ ಪ್ರಯುಕ್ತ ಅಧ್ಯಾಪಕರಿಗೆ ಆಯೋಜಿಸಲಾದ ಜಿಲ್ಲಾಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರೌಢವಿಭಾಗ ಶ್ರೀಮತಿ ಸೌಮ್ಯ ಮಾತಾಜಿ ಹಾಗೂ ಶ್ರೀಮತಿ ವಿನುತಾ ಮಾತಾಜಿ ಭಾಗವಹಿಸಿ ಗುಲ್ಬರ್ಗಾದಲ್ಲಿ ನಡೆಯುವ ಪ್ರಾಂತಮಟ್ಟದ ರಸಪ್ರಶ್ನೆ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

## ವಿಜ್ಞಾನ ಪ್ರಾತ್ಯಕ್ಷಿಕೆ :

ದಿನಾಂಕ 30/12/13ರಂದು ವಿವೇಕಾನಂದ ವಿದ್ಯಾಕೇಂದ್ರದಲ್ಲಿ ಜರುಗಿದ ವಿಜ್ಞಾನ ಪ್ರಯೋಗ ಪ್ರಾತ್ಯಕ್ಷಿಕೆಯಲ್ಲಿ ಪ್ರೌಢವಿಭಾಗದ 45 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

## ರಸಪ್ರಶ್ನೆ :

ದಿನಾಂಕ 30/12/13 ರಂದು ತೆಂಕಿಲದ ವಿವೇಕಾನಂದ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆ ಅಂಗವಾಗಿ ರಸಪ್ರಶ್ನೆ ದೇಶಭಕ್ತಿಗೀತೆ ಮತ್ತು ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಇದರಲ್ಲಿ ಭಾಗವಹಿಸಿ ರಸಪ್ರಶ್ನೆಯಲ್ಲಿ ರಘುವೀರ ಮತ್ತು ತಂಡ ದ್ವಿತೀಯಸ್ಥಾನ ಪಡೆದಿರುತ್ತಾರೆ.

## ಜನಪದಗೀತೆ ಸ್ಪರ್ಧೆ :

ಶಂಭೂರು ಸರಕಾರಿ ಪ್ರೌಢಶಾಲೆಯ ದಶಮಾನೋತ್ಸವದ ಅಂಗವಾಗಿ ನಡೆಸಿದ ಸ್ಪರ್ಧೆಗಳಲ್ಲಿ ನಮ್ಮ ಶಾಲೆಯ ದೀಕ್ಷಿತಾ(10 ಆಜಾದ್) ಮತ್ತು ತಂಡ ಜಾನಪದಗೀತೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮಸ್ಥಾನ ಪಡೆದಿರುತ್ತಾರೆ.

## ಕನಕದಾಸ ಜಯಂತಿ :

ಭಾರತೀಯ ಸಂಸ್ಕೃತಿ ಪ್ರತಿಷ್ಠಾನ ಇದರ ಆಶ್ರಯದಲ್ಲಿ ಕನಕದಾಸ ಜಯಂತಿ ನಿಮಿತ್ತ ಆಯೋಜಿಸಿದ್ದ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರು:

ಪ್ರಥಮ: ವಾಸವಿ (10 ಭರತ), ದ್ವಿತೀಯ: ತೇಜಾಶ್ರೀ(10 ಚ್ಯವನ), ತೃತೀಯ: ಸುಜಿತ್(9 ಓಬವ್ವ)

## ಕಂಪ್ಯೂಟರ್ ಬಿಡಿಭಾಗಗಳ ಪ್ರದರ್ಶನ :

ದಿನಾಂಕ 20/12/2013ರಂದು ಕಾರ್ಮೆಲ್ ಕಾನ್ವೆಂಟ್ ಮೊಡಂಕಾಪು ಇಲ್ಲಿ ನಡೆದ ಕಂಪ್ಯೂಟರ್ ಬಿಡಿ ಭಾಗಗಳ ಪ್ರದರ್ಶನದಲ್ಲಿ ನಮ್ಮ ಶಾಲಾ 70 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

## ವಿದ್ಯಾಭಾರತಿ ಪ್ರಾಂತ ಶೈಕ್ಷಣಿಕ ಸಮ್ಮೇಳನ :



ವಿದ್ಯಾಭಾರತಿ ಕರ್ನಾಟಕ ಇದರ ಸಂಯೋಜನೆಯಲ್ಲಿ ಡಿ.20 ರಿಂದ 23ರ ತನಕ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಜರುಗಿದ ಪ್ರಾಂತೀಯ ಶೈಕ್ಷಣೀಯ ಸಮ್ಮೇಳನದಲ್ಲಿ ನಮ್ಮ ವಿದ್ಯಾಕೇಂದ್ರದ ಅಧ್ಯಕ್ಷರು, ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ಪ್ರಭಾಕರ ಭಟ್ ಕಲ್ಲಡ್ಕ ಅಲ್ಲದೇ ಶಿಶುಮಂದಿರ, ಪ್ರಾಥಮಿಕ, ಪ್ರೌಢ ಮತ್ತು ಕಾಲೇಜು ವಿಭಾಗದ ಪ್ರಮುಖರು, ಸಹಅಧ್ಯಾಪಕರು ಮತ್ತು ಆಡಳಿತ ಮಂಡಳಿಯವರು ಭಾಗವಹಿಸಿರುತ್ತಾರೆ.

## ಭವಿಷ್ಯತ್ತಿಗಾಗಿ ಯೋಗ :

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆ ಶಾಂತಿವನ ಟ್ರಸ್ಟ್ ಇವರು ಆಯೋಜಿಸಿರುವ ಭವಿಷ್ಯತ್ತಿಗಾಗಿ ಯೋಗ ಕಾರ್ಯಕ್ರಮದ ಅಂಗವಾಗಿ ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದ ಮೈದಾನದಲ್ಲಿ 2004 ವಿದ್ಯಾರ್ಥಿಗಳು ಸಾಮೂಹಿಕವಾಗಿ ಸೂರ್ಯನಮಸ್ಕಾರ ಹಾಗೂ ಯೋಗಾಸನ ಮಾಡುವ ಚಾರಿತ್ರಿಕ ಗಿನ್ನಿಸ್ ದಾಖಲೆಗೆ ಸೇರಿಕೊಂಡರು. ಒಟ್ಟು 31 ನಿಮಿಷಗಳ ಕಾಲ ನಿರಂತರ ಸೂರ್ಯನಮಸ್ಕಾರ ಹಾಗೂ ಯೋಗಾಸನ ಮಾಡಿದರು. ಬಂಟ್ವಾಳ ಕ್ಷೇತ್ರ ಶಿಕ್ಷಾಣಾಧಿಕಾರಿ ಶೇಷಶಯನ ಕಾರಿಂಜ 2004 ವಿದ್ಯಾರ್ಥಿಗಳು ಭಾಗವಹಿಸಿರುವ ಬಗ್ಗೆ ಫಲಕ ಸಹಿತ ಘೋಷಣೆ ಮಾಡಿದರು. ಅನೇಕ ಗಣ್ಯರು ಉಪಸ್ಥಿತರಿದ್ದರು.



# ಮಕ್ಕಳಲೋಕ ಮಕ್ಕಳಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ ಬಂಟ್ವಾಳ ತಾಲೂಕು ಮಕ್ಕಳಲೋಕ ಹಾಗೂ ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ತಾಲೂಕುಮಟ್ಟದ ಮಕ್ಕಳಸಾಹಿತ್ಯ ಸಮ್ಮೇಳನ ನರೇಂದ್ರ ಸಭಾಂಗಣ, ಪಂಜೆ ಮಂಗೇಶರಾಯ ವೇದಿಕೆಯಲ್ಲಿ ಜರಗಿತು.



ಕಲ್ಲಡ್ಕ ಪೇಟೆಯಲ್ಲಿ ಕರ್ನಾಟಕ ಮಾತೆ ಭುವನೇಶ್ವರಿಯ ಭವ್ಯ ಮೆರವಣಿಗೆ ಜರಗಿತು. ವಿದ್ಯಾರ್ಥಿಗಳು ಘೋಷ್ ವಾದನದೊಂದಿಗೆ ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರ, ಕನ್ನಡದ ಕವಿಗಳ ನುಡಿಮುತ್ತುಗಳು ಹಾಗೂ ಕನ್ನಡ




ಧ್ವಜಗಳೊಂದಿಗೆ ಭಾಗವಹಿಸಿದ್ದರು. ತಾ.ಪಂ.ಸದಸ್ಯ ದಿನೇಶ್ ಅಮ್ಟೂರು ಮೆರವಣಿಗೆ ಉದ್ಘಾಟಿಸಿ ಶುಭಹಾರೈಸಿದರು.

ವಿದ್ಯಾಕೇಂದ್ರ ಸಂಚಾಲಕರಾದ ಡಾ॥ಪ್ರಭಾಕರ ಭಟ್ ಧ್ವಜಾರೋಹಣ ಮಾಡಿ ಶುಭ ಹಾರೈಸಿದರು. ವಿದ್ಯಾರ್ಥಿ ರಾಮನಾರಾಯಣ ಧ್ವಜಾರೋಹಣ ನೆರವೇರಿಸಿದರು. ಶಿಕ್ಷಕರಾದ ಶ್ರೀವಿನೋದ್, ಶ್ರೀ ಪ್ರಶಾಂತ, ಶ್ರೀಮತಿ ಸೌಮ್ಯ ವ್ಯವಸ್ಥಾಪಕರಾಗಿದ್ದರು.

ಮಕ್ಕಳ ಸಾಹಿತ್ಯ ಸಮ್ಮೇಳನದ ನಿಕಟಪೂರ್ವ ಅಧ್ಯಕ್ಷೆ ದ.ಕ.ಜಿ.ಪ.ಹಿ.ಪ್ರಾ.ಶಾಲೆ ಕೆದ್ದಳಿಕೆಯ ಅನುಷಾ ಕರ್ನಾಟಕಮಾತೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಮಕ್ಕಳ ತಾಲೂಕು ಅಧ್ಯಕ್ಷ ಎಂ.ಅನಂತಕೃಷ್ಣ ಹೆಬ್ಬಾರ್ ಪ್ರಸ್ತಾವನೆಗೈದರು. ವಿದ್ಯಾಕೇಂದ್ರ ಸಂಚಾಲಕ ಡಾ॥ ಪ್ರಭಾಕರ ಭಟ್ ಸ್ವಾಗತಿಸಿದರು.

ಹಿರಿಯಸಾಹಿತಿ ಪ.ರಾಮಕೃಷ್ಣಶಾಸ್ತ್ರಿ ತೆಂಕಕಾರಂದೂರು ವಿದ್ಯಾರ್ಥಿಗಳ ಕವನ ಸಂಕಲನ 'ಕಲ್ಮಳೆ' ಕಥಾಸಂಕಲನ 'ಒಂದಾನೊಂದು ಊರಿನಲ್ಲಿ' 'ತೆರೆ' ಕವನಸಂಕಲನ ಬಿಡುಗಡೆಗೊಳಿಸಿದರು.

ಸರಸ್ವತಿ ವಿದ್ಯಾಲಯ ಕಡಬದ ಶ್ರುತಿ ಕೆ.ಎಸ್. ಮುಖ್ಯ ಅತಿಥಿಯಾಗಿ ಮಾತನಾಡಿದರು. ಶ್ರೀರಾಮ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಪ್ರತಿಷಾ ಎಂ. ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕ.ಸಾ.ಪ. ಅಧ್ಯಕ್ಷ ಜಯಾನಂದ ಪೆರಾಜೆ, ಮುಖ್ಯೋಪಾಧ್ಯಾಯರಾದ ವಸಂತಮಾಧವ ಉಪಸ್ಥಿತರಿದ್ದರು. 10ನೇ ತರಗತಿ ಚೈತ್ರಾ ರೈ ನಿರೂಪಿಸಿ, ಕುಸುಮಾವತಿ ಮಜಿ ವಂದಿಸಿದರು. ಶಿಕ್ಷಕ ಮನೋಜ ರೈ, ಗೋಪಾಲ ಅಮ್ಟೂರು, ಗಾಯತ್ರಿಮಾತಾಜಿ ಸಹಕರಿಸಿದರು.

**ಕವಿಗೋಷ್ಠಿ**

ವಿದ್ಯಾರ್ಥಿಗಳ ಕವಿಗೋಷ್ಠಿಯಲ್ಲಿ 50ಕ್ಕೂ ಹೆಚ್ಚು ಮಂದಿ ಸ್ವರಚಿತ ಕವನಗಳನ್ನು ವಾಚಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರಿಗೆ ಅವರ ಭಾವಗೀತೆಯನ್ನು ಹಾಡಿ ನೃತ್ಯ ಸಣಯೋಜನೆ ಮಾಡಿ ವಿದ್ಯಾರ್ಥಿಗಳು ಕವಿನಮನ ಸಲ್ಲಿಸಿದರು.

ವಿದ್ಯಾರ್ಥಿಗಳಾದ ಚೈತ್ರಾ ವಿಟ್ಲ ಸ್ವಾಗತಿಸಿ, ಸುಸ್ಮಿತಾ ಕೆ.ಕರ್ಕೇರಾ ವಿಟ್ಲ ನಿರೂಪಿಸಿದರು. ಭರತ್ ನರಿಕೊಂಬು ವಂದಿಸಿದರು. ಶಿಕ್ಷಕ ಜಯರಾಮ ಪಡ್ರೆ ರಾಯಿ ವ್ಯವಸ್ಥೆಗೊಳಿಸಿದರು.

ಸಾಹಿತ್ಯದ ಕುರಿತು ನಡೆದ ಮಾತುಕತೆ–ಭಾಷಣ ಕಾರ್ಯಕ್ರಮದಲ್ಲಿ ಕೃತಿಶೆಟ್ಟಿ ಗೋಳ್ತಮಜಲು ಸ್ವಾಗತಿಸಿದರು. ಸಾಹಿತ್ಯ, ಕಥೆ, ಕವನಗಳ ಬಗ್ಗೆ ವಿದ್ಯಾರ್ಥಿಗಳು ಮಾತನಾಡಿದರು. ವಾಸವಿ ಕಲ್ಲಡ್ಕ ಜಿ.ಎಸ್.ಎಸ್. ಅವರ ಭಾವಗೀತೆ ಹಾಡಿದರು. ಗೌತಮಿ ಕೆ. ಅವರ 'ಮಂಜುಹನಿ' ಅನುಷಾ ಕೆದ್ದಳಿಕೆ ಅವರು 'ಗುಟುಕು' ವಿಜಯಭಾರತಿ ವಿಟ್ಲ ಅವರ ಸೂಪರ್‌ಲಡ್ಡು ಪುಸ್ತಕಗಳಿಗೆ ಪ್ರೋತ್ಸಾಹ ಧನ ನೀಡಲಾಯಿತು.

ಚಿತ್ತಚಿತ್ತಾರದಲ್ಲಿ ಬಂಟ್ವಾಳ ತಾಲೂಕಿನ ಕವಿಗಳಾದ ಪಂಜೆಮಂಗೇಶರಾವ್, ಎಚ್.ಎನ್. ಹೆಬ್ಬಾರ್ ಮೊದಲಾದವರ ಕವಿತೆಗಳಿಗೆ ನೃತ್ಯ ಸಂಯೋಜಿಸಿ ವಿದ್ಯಾರ್ಥಿಗಳು ಚಿತ್ರ ಬಿಡಿಸಿದರು. ನವ್ಯ ಬೋಳಂತೂರು ಸ್ವಾಗತಿಸಿ, ಶುಭಶ್ರೀ ಪಾಣೆಮಂಗಳೂರು ನಿರೂಪಿಸಿ, ಅರ್ಚನಾ ಎನ್.ವಿಟ್ಲ ವಂದಿಸಿದರು. ಶಿಕ್ಷಕ ರಮೇಶ್ ಬಿ.ಕೆ. ವಿಟ್ಲ ವ್ಯವಸ್ಥೆಗೊಳಿಸಿದ್ದರು.

# ಪದವಿಪೂರ್ವ ವಿಭಾಗ

**ಶ್ರಮದಾನ :**

ಶ್ರೀ ನಿಟಿಲಾಕ್ಷ ಸದಾಶಿವ ದೇವಸ್ಥಾನದ ಜೀರ್ಣೋದ್ಧಾರದ ಪ್ರಯುಕ್ತ ನಡೆಯುತ್ತಿರುವ ಶ್ರಮದಾನ ಸೇವೆಯಲ್ಲಿ ದಿನಾಂಕ 09–12–13ರಂದು ಪದವಿ ಪೂರ್ವ ವಸತಿನಿಲಯದ 45 ವಿದ್ಯಾರ್ಥಿಗಳು ಹಾಗೂ 10–12–13ರಂದು ಸ್ಥಳೀಯ ಊರುಗಳ 40 ವಿದ್ಯಾರ್ಥಿಗಳು ಭಾಗವಹಿಸಿದರು. ಪ್ರಾಚಾರ್ಯ ಕೃಷ್ಣಪ್ರಸಾದ, ವಸಂತ ಬಲ್ಲಾಳ, ಗಿರೀಶ್ ಕುಮಾರ್ ಹಾಗೂ ಮಹೇಶ ನೆಟ್ಲ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ರಸಪ್ರಶ್ನೆ ರಾಜ್ಯಮಟ್ಟದಲ್ಲಿ ಪ್ರಥಮ :**

ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆಯ ಪ್ರಯುಕ್ತ ವಿದ್ಯಾಭಾರತಿ ಕರ್ನಾಟಕ ಇವರು ಶಾರದಾ ವಿದ್ಯಾಲಯ ಮಂಗಳೂರು ಇಲ್ಲಿ ಆಯೋಜಿಸಿದ ಜಿಲ್ಲಾ ಮಟ್ಟದ ರಸಪ್ರಶ್ನೆಯಲ್ಲಿ ಪಲ್ಲವಿ, ಜ್ಯೋತಿ(ಪ್ರಥಮ ವಾಣಿಜ್ಯ) ಹಾಗೂ ಶ್ರೀದೇವಿ(ದ್ವಿತೀಯ ವಾಣಿಜ್ಯ) ಪ್ರಥಮ ಸ್ಥಾನ ಗಳಿಸಿ, ಕಲ್ಬುರ್ಗಿಯಲ್ಲಿ ನಡೆದ ರಾಜ್ಯ ಮಟ್ಟದ ಸ್ಪರ್ಧೆಯಲ್ಲೂ ಪ್ರಥಮ ಸ್ಥಾನ ಗಳಿಸಿರುತ್ತಾರೆ.

**ಪ್ರತಿಭಾ ಪುರಸ್ಕಾರ :**

ಕ್ರೀಡೆ ಹಾಗೂ ಸಾಂಸ್ಕೃತಿಕ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸುವ "ಪ್ರತಿಭಾ ಪುರಸ್ಕಾರ" ಕಾರ್ಯಕ್ರಮದಲ್ಲಿ ಮಂಗಳೂರು




ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಣಾಧಿಕಾರಿ ಡಾ. ಸದಾನಂದ ಪೆರ್ಲ ಭಾಗವಹಿಸಿ, ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವ ದೃಷ್ಟಿಯಿಂದ ಸ್ಪರ್ಧೆಗಳನ್ನು ಏರ್ಪಡಿಸುವಾಗ ಜಾಗರೂಕತೆ ವಹಿಸುವುದು ಅಗತ್ಯ. ಸ್ಪರ್ಧೆಗಳಿಂದಾಗಿ ವೈರತ್ವ ಬೆಳೆಯದೆ ಮನಸ್ಸುಗಳು ಬೆಸೆಯುವ ಕೆಲಸ ಆಗಬೇಕಾದುದು ಈ ದಿನದ ಅಗತ್ಯ . ವಿದ್ಯಾರ್ಥಿಗಳ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸಿ ಅವರಲ್ಲಿ ಅಡಕವಾಗಿರುವ ಪ್ರತಿಭೆಗಳನ್ನು ಹೊರತೆಗೆಯಬೇಕು. ಶಾಲಾ ಕಾಲೇಜುಗಳಲ್ಲಿ ಪಡೆದ ಉತ್ತಮ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ರಾಷ್ಟ್ರನಿರ್ಮಾಣದಲ್ಲಿ ಕೈಜೋಡಿಸಬೇಕು ಎಂದರು.

ಮುಖ್ಯಅತಿಥಿಗಳಾಗಿ ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜು ಪುತ್ತೂರಿನ ಪ್ರಾಂಶುಪಾಲ ಗೋಪಿನಾಥ ಶೆಟ್ಟಿ ಮಾತನಾಡಿ ಬದಲಾಗುತ್ತಿರುವ ಸಮಾಜದಲ್ಲಿ ಯುವಜನತೆಯು ಹೊಂದಾಣಿಕೆಗಳನ್ನು ಮಾಡಿಕೊಂಡು ಬೆಳೆಯಬೇಕು, ಈ ಹಂತದಲ್ಲಿ ಮಾನವೀಯ ಮೌಲ್ಯಗಳು ಕ್ಷೀಣಿಸದ ಹಾಗೆ ಎಚ್ಚರ ವಹಿಸಬೇಕು ಎಂದರು.




ಬಿ.ಎಸ್.ಎಫ್.ನ ನಿವೃತ್ತ ಅಧಿಕಾರಿ ಚಂದಪ್ಪ ಮೂಲ್ಯ ಹಾಗೂ ಸಂಸ್ಥೆಯ ಸಂಚಾಲಕ ಡಾ. ಪ್ರಭಾಕರ್ ಭಟ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ವಿಜೇತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಪ್ರಾಚಾರ್ಯ ಕೃಷ್ಣಪ್ರಸಾದ ಸ್ವಾಗತಿಸಿ, ಉಪಪ್ರಾಚಾರ್ಯ ವಸಂತ ಬಲ್ಲಾಳ್ ವಂದಿಸಿ, ಉಪನ್ಯಾಸಕ ರಾಜಾರಾಮ್ ವರ್ಮ ವಿಟ್ಲ ಕಾರ್ಯಕ್ರಮ ನಿರೂಪಿಸಿದರು.

## ವಿಜಯದಿನ ಆಚರಣೆ

1992 ಡಿಸೆಂಬರ್ 6 ಹಿಂದೂಗಳಿಗೆ ಸ್ವರ್ಣಾಕ್ಷರದಲ್ಲಿ ಬರೆದಿಡಬಹುದಾದ ಸುವರ್ಣದಿನ. ಅಯೋಧ್ಯೆಯ ವಿವಾದಿತ ಬಾಬರಿ ಕಟ್ಟಡ ನೆಲಸಮಗೊಂಡು ದೇಶವೊಂದಕ್ಕೆ ತನ್ನ ಕಳಂಕವನ್ನು ತೊಡೆದುಕೊಂಡ ಒಂದು ಪವಿತ್ರ ದಿನ ಎಂದು ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಹೇಳಿದರು.

ಅವರು ಕಾಲೇಜು ವಿಭಾಗದ ವಿದ್ಯಾರ್ಥಿ ಸಂಘ ಆಯೋಜಿಸಿದ್ದ ವಿಜಯದಿನ ಆಚರಣೆಯಲ್ಲಿ ಮಾತನಾಡುತ್ತ ಈ ವಿಷಯ ತಿಳಿಸಿದರು.

**ಫಲಿತಾಂಶ :**

ಶ್ರೀರಾಮ ಪ್ರಥಮದರ್ಜೆ ಕಾಲೇಜಿನ 1, 3 ಮತ್ತು 5ನೇ ಸೆಮಿಸ್ಟರ್‌ಗಳ ತರಗತಿವಾರು ಫಲಿತಾಂಶ ಹೀಗಿದೆ.

| | | | |
|---|---|---|---|
| ಪ್ರ.ಬಿ.ಕಾಂ., | 86% | ಪ್ರ. ಬಿ.ಎ. | 68% |
| ದ್ವಿ. ಬಿ.ಕಾಂ. | 76% | ದ್ವಿ. ಬಿ.ಬಿ.ಎಂ. | 86% |
| ತೃ. ಬಿ.ಕಾಂ. | 65% | ತೃ. ಬಿ.ಬಿ.ಎಂ. | 88% |


## ಪದವಿ ವಿಭಾಗದ 1, 3 ಹಾಗೂ 5ನೇ ಸೆಮಿಸ್ಟರ್‌ಗಳ ಫಲಿತಾಂಶ ಪ್ರಕಟಗೊಂಡಿದ್ದು ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳು



| | | | | | | | |
|---|---|---|---|---|---|---|---|
| ದಿವ್ಯಾ 86.22% | ಹರ್ಷಿಣಿ 84% | ದೇವಕಿ 82.07% | ಬಬಿತಾ 82% | ಜ್ಯೋತಿ ಬಿ. 78% | ದೀಕ್ಷಿತಾ ಎಸ್. 76% | ರಶ್ಮಿಕುಮಾರಿ 76% | ಲಾವಣ್ಯ 75% |
| III B.Com | III B.Com | III B.Com | III B.Com | III B.Com | III B.Com | III B.Com | III B.Com |



| | | | | | | | |
|---|---|---|---|---|---|---|---|
| ವಿನುತ 74% | ನಮಿತ 74% | ಜಯಶ್ರೀ 74% | ಶೃತಿ 73% | ಅಕ್ಷಿತ 72% | ಅಕ್ಷತ 72% | ರಮ್ಯ 72% | ರಂಜಿತ 71% |
| III B.Com | III B.Com | III B.Com | III B.Com | III B.Com | III B.Com | III B.Com | III B.Com |




| | | | | | | | |
|---|---|---|---|---|---|---|---|
| ನಮಿತಾಕ್ಷಿ 70% | ಕವಿತಾ 70% | ರಜತ್ 78% | ಅಕ್ಷತ 74% | ಸೋನಿಕ 70% | ಸುಶ್ಮಿತಾ 75% | ಗಿರೀಶ 71% | ನವ್ಯಾ 78% |
| III B.Com | III B.Com | III B.B.M. | III B.B.M. | III B.B.M. | II B.B.M. | II B.B.M. | II B.Com |



| | | | | | | | |
|---|---|---|---|---|---|---|---|
| ಅರ್ಚನ 77% | ಕೃತಿ 77% | ರಶ್ಮಿ 76% | ಪ್ರಿಯ 75% | ಚಿತ್ರಾಕ್ಷಿ 73% | ಶಾರದಾ 72% | ಪವಿತ್ರ 72% | ವೆಂಕಟೇಶ 72% |
| II B.Com | II B.Com | II B.Com | II B.Com | II B.Com | II B.Com | II B.Com | II B.Com |



| | | | | | | | |
|---|---|---|---|---|---|---|---|
| ಮಮತ 72% | ಪ್ರಿಯಾಂಕ 72% | ಚಿತ್ರಾವತಿ 70% | ಹರಿಣಾಕ್ಷಿ 72% | ನಿತಿನ್ 84% | ಚೈತ್ರ 83% | ಪವಿತ್ರ 82 % | ಸೌಜನ್ಯ 80% |
| II B.Com | II B.Com | II B.Com | I B.A. | I B.Com | I B.Com | I B.Com | I B.Com |



| | | | | | | | |
|---|---|---|---|---|---|---|---|
| ಅದಿತಿ 80% | ವಿನುತ 79% | ಧನಶ್ರೀ 78% | ಅಶ್ವಿನಿ 77% | ವಿಜಯಲಕ್ಷ್ಮಿ 76% | ಚೈತ್ರಶ್ರೀ 75% | ಮೋಹಿನಿ 74% | ಜ್ಯೋತಿ 74% |
| I B.Com | I B.Com | I B.Com | I B.Com | I B.Com | I B.Com | I B.Com | I B.Com |



| | | |
|---|---|---|
| ವರ್ಷಿತ 73% | ಶಯನಾಕ್ಷಿ 73% | ಜಯಲಕ್ಷ್ಮಿ 73% |
| I B.Com | I B.Com | I B.Com |

# ಅಭಿನಂದನೆಗಳು

# ರಾಷ್ಟ್ರೀಯ ಏಕತೆಗಾಗಿ ಮತ್ತೆ ಸರ್ದಾರ್ ಪಟೇಲ್



**ದೇಶದ ಏಕತೆಯನ್ನು ಸಾರುವ, ಜಗತ್ತಿನ ಅತ್ಯಂತ ಎತ್ತರದ ಸರ್ದಾರ್ ಪಟೇಲರ ಭವ್ಯಸ್ಮಾರಕವನ್ನು ನಿರ್ಮಿಸಿ ಶ್ರದ್ಧಾಸುಮನವನ್ನು ಅರ್ಪಿಸುವುದರ ಜೊತೆಗೆ ಇಡೀ ದೇಶವನ್ನು ರಾಷ್ಟ್ರೀಯ ಭಾವೈಕ್ಯದಲ್ಲಿ ಬೆಸೆಯುವ ಕನಸು ಕಂಡವರು ಗುಜರಾತಿನ ಮುಖ್ಯಮಂತ್ರಿ ಶ್ರೀ ನರೇಂದ್ರ ಮೋದಿ. ಏಕತಾ ಪ್ರತಿಮೆಯ ನಿರ್ಮಾಣಕ್ಕೆ ಒಂದು ರಾಷ್ಟ್ರೀಯ ಆಂದೋಲನದ ರೂಪ ನೀಡಿ ಜನರಲ್ಲಿ ದೇಶಭಕ್ತಿ ಮತ್ತು ಸ್ವಾಭಿಮಾನವನ್ನು ಎಬ್ಬಿಸುವ ಕಲ್ಪನೆ ಮೋದಿಯವರ ದೂರದೃಷ್ಟಿಯ ಪ್ರತೀಕವಾಗಿದೆ. ಜೊತೆಗೆ ಪ್ರತಿಮೆಯ ಎತ್ತರದಿಂದ ಹಿಡಿದು, ತತ್ಸಂಬಂಧಿತ ವ್ಯವಸ್ಥೆಗಳು, ಸಂಸ್ಥೆಗಳು ಮತ್ತು ಯೋಜನೆಗಳ ಸಮಗ್ರವಾದ ಬೃಹತ್ ಕಲ್ಪನೆ ಅವರ ಚಿಂತನೆಯ ಆಳವನ್ನು ಬಿಂಬಿಸುತ್ತದೆ.**

'ಏಕ ಭಾರತ ಶ್ರೇಷ್ಠ ಭಾರತ' ಎನ್ನುವ ಸಂದೇಶದೊಂದಿಗೆ ರಾಷ್ಟ್ರೀಯ ಭಾವೈಕ್ಯದ ಪುನರ್ ಜಾಗೃತಿಗಾಗಿ ಏಕತಾ ಪ್ರತಿಮೆಯ (Statue of Unity) ನಿರ್ಮಾಣ ಕಾರ್ಯ ಆರಂಭಗೊಂಡಿದೆ. ಸ್ವಾತಂತ್ರ್ಯಾನಂತರ ಹರಿದು ಹಂಚಿ ಹೋಗಬಹುದಾಗಿದ್ದ ಭಾರತದ ಏಕತೆಯನ್ನು ಸದೃಢ ಸೂತ್ರದಲ್ಲಿ ಬಂಧಿಸಿದ ಭಾರತದ ಪ್ರಥಮ ಉಪಪ್ರಧಾನಿ ಹಾಗೂ ಗೃಹಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲ ರವರ ಸ್ಮೃತಿಯಲ್ಲಿ ಗುಜರಾತಿನ ನರ್ಮದಾ ಸರೋವರ ಅಣೆಕಟ್ಟೆಯ ಹಿನ್ನೀರಿನ ಪ್ರದೇಶದಲ್ಲಿರುವ ಸಾಧು ಬೇಟ್ ನಡುಗಡ್ಡೆಯಲ್ಲಿ ಸರ್ದಾರ್ ಪಟೇಲ್ ಭವ್ಯ ಸ್ಮಾರಕ 'ಏಕತಾ ಪ್ರತಿಮೆ' ನಿರ್ಮಾಣವಾಗಲಿದೆ. ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರ ಕಲ್ಪನೆಯಲ್ಲಿ 2010ರಲ್ಲಿ ಬೀಜಾಂಕುರವಾದ ಏಕತಾ ಪ್ರತಿಮೆಯ ನಿರ್ಮಾಣಕ್ಕೆ ಸರ್ದಾರ ಪಟೇಲರ ಪುಣ್ಯತಿಥಿ 2013ರ ಅಕ್ಟೋಬರ್ 31ರಂದು ಶಿಲಾನ್ಯಾಸ ನೆರವೇರಿತು. ಭಾರತ ಕಂಡ ಒಬ್ಬ ಶ್ರೇಷ್ಠ ನಾಯಕ ಮುತ್ಸದ್ದಿ ಸರ್ದಾರ್ ಪಟೇಲರ ಪ್ರತಿಮೆ ಸ್ಥಾಪನೆ ಕಾರ್ಯದೊಂದಿಗೆ ರಾಷ್ಟ್ರೀಯ ಏಕತೆಯನ್ನು ಪುನಃ ಜಾಗೃತಗೊಳಿಸುವ ಈ ಆಂದೋಲನ ಅನೇಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ನರ್ಮದೆಯ ಹಿನ್ನೀರಿನಲ್ಲಿ ಗರುಡೇಶ್ವರ ಕಿರು ಅಣೆಕಟ್ಟೆಯಿಂದ 3.2 ಕಿ.ಮೀ. ಅಂತರದಲ್ಲಿ ನಿರ್ಮಾಣವಾಗುತ್ತಿರುವ ಸರ್ದಾರ್ ಪಟೇಲರ 182 ಮೀಟರ್ ಎತ್ತರದ ಈ ಪ್ರತಿಮೆ ಪ್ರಪಂಚದಲ್ಲೇ ಅತೀ ಎತ್ತರದ ಮೂರ್ತಿಯಾಗಲಿದೆ. ಪ್ರತಿಮೆಯ ಎತ್ತರ ಏಳು ಮಹಡಿ ಯಷ್ಟಾಗಲಿದ್ದು, 56 ಮೀ. ಎತ್ತರದ ತಳಮನೆಯೂ ಸೇರಿದಂತೆ ಒಟ್ಟು 240 ಮೀಟರಿನ ಉನ್ನತ ಸ್ಮಾರಕ ನಿರ್ಮಾಣವಾಗಲಿದೆ. ಬೃಹತ್ ಏಕತಾ ಪ್ರತಿಮೆಯು ಅಮೆರಿಕದ ಸ್ಟಾಚ್ಯೂ ಆಫ್ ಲಿಬರ್ಟಿಯ ಎರಡು ಪಟ್ಟು, ಬ್ರೆಜಿಲ್‌ನ ಯೇಸು ಕ್ರಿಸ್ತನ ಪ್ರತಿಮೆಯ 5 ಪಟ್ಟು, ಜಪಾನಿನ ಉಶಿಕು ದೈಬುಟ್ಸು ಬುದ್ಧನ ಪ್ರತಿಮೆಯ ಒಂದೂವರೆ ಪಟ್ಟು ಮತ್ತು ಚೈನಾದ ಸ್ಪ್ರಿಂಗ್ ದೇವಾಲಯದ ಬುದ್ಧನ ಪ್ರತಿಮೆಗಿಂತಲೂ ಹಿರಿದಾಗಲಿದೆ. ಸ್ಮಾರಕದ ಸುತ್ತಲಿನ ಪ್ರದೇಶವು ವಿಶ್ವದರ್ಜೆಯ ಪ್ರವಾಸಿ ಕ್ಷೇತ್ರವಾಗಿ ಅಭಿವೃದ್ಧಿಗೊಳ್ಳಲಿದೆ. ಸ್ಮಾರಕಕ್ಕೆ ಸಂಪರ್ಕ ಸೇತುವೆ, ನೆಲಮಹಡಿಯಲ್ಲಿ ಭಾರತದ ಇತಿಹಾಸ ಹಾಗೂ ಸರ್ದಾರ್ ಪಟೇಲರ ಜೀವನವನ್ನು ಪ್ರತಿಬಿಂಬಿಸುವ ಸಂಗ್ರಹಾಲಯ, ದೃಶ್ಯ ಮತ್ತು ಶ್ರವಣ ಪ್ರದರ್ಶನ ಗ್ಯಾಲರಿ, ಲೇಸರ್, ಬೆಳಕು ಮತ್ತು ಧ್ವನಿ ಪ್ರದರ್ಶನ ಹಾಗೂ ಮನರಂಜನಾ ಪಾರ್ಕ್‌ಗಳು ನಿರ್ಮಾಣಗೊಳ್ಳಲಿವೆ.

ಸಾತ್ಪುರ ಬೆಟ್ಟ ಶ್ರೇಣಿಗಳ ನಡುವಿನ ಸರ್ದಾರ್ ಸರೋವರ ಅಣೆಕಟ್ಟೆಯ ರಮಣೀಯ ದೃಶ್ಯದ ವೀಕ್ಷಣೆಯ ಸಲುವಾಗಿ 400 ಅಡಿ ಎತ್ತರದ ದರ್ಶನಾ ಗ್ಯಾಲರಿ ಸಹ ನಿರ್ಮಾಣಗೊಳ್ಳಲಿದೆ. ಸ್ಮಾರಕಕ್ಕೆ ಹೊಂದಿಕೊಂಡಂತೆ ಸರ್ದಾರ್ ಪಟೇಲರ ಆಸಕ್ತಿಯ ಮತ್ತು ಕನಸಿನ ವಿಷಯಗಳಾದ ಗ್ರಾಮ ವಿಕಾಸ, ಬುಡಕಟ್ಟು ಅಭಿವೃದ್ಧಿ, ಕೃಷಿ ವಿಕಾಸ, ಜಲಸಂವರ್ಧನೆ, ಸುಶಾಸನ ಮುಂತಾದ ವಿಷಯಗಳ ಸಂಶೋಧನಾ ಮತ್ತು ಶಿಕ್ಷಣ ಕೇಂದ್ರಗಳು ನಿರ್ಮಾಣಗೊಳ್ಳಲಿವೆ. ಏಕತಾ ಪ್ರತಿಮೆಯ ನಿರ್ಮಾಣ ಕೇವಲ ಸರ್ಕಾರದ ಕಾರ್ಯಕ್ರಮವಾಗಬಾರದು; ಇದು ದೇಶದ ಮೂಲೆಮೂಲೆಯ ಎಲ್ಲ ದೇಶಭಕ್ತ ನಾಗರಿಕರ ಸಹಕಾರದಿಂದ ನಿರ್ಮಾಣಗೊಳ್ಳಬೇಕೆಂಬುದು ನರೇಂದ್ರ ಮೋದಿ ಅವರ ಕನಸು. ಇದಕ್ಕಾಗಿ ಇಡೀ ದೇಶದಿಂದ ಆವಶ್ಯಕ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಹಾಗೂ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ 'ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಏಕತಾ ಟ್ರಸ್ಟ್' ಅನ್ನು ನಿರ್ಮಿಸಲಾಗಿದೆ. ದೇಶದ ಏಕತೆಯ ಸಂಕೇತವಾಗಿ ನಿರ್ಮಾಣಗೊಳ್ಳಲಿರುವ ಈ ಪ್ರತಿಮೆಯ ನಿರ್ಮಾಣಕ್ಕಾಗಿ, ವಿಶ್ವದ ಶ್ರೇಷ್ಠ ತಂತ್ರಜ್ಞಾನ ಹಾಗೂ ಶ್ರೇಷ್ಠ ನಿರ್ಮಾಣ ತಂತ್ರಜ್ಞರನ್ನು 'ಎಮಿಸಿಕೊಳ್ಳಲಾಗಿದೆ. ಲೋಹಸಂಗ್ರಹ ಅಭಿಯಾನದ ಅಂಗವಾಗಿ ದೇಶದ ಸುಮಾರು 7 ಲಕ್ಷ ಗ್ರಾಮಗಳ ರೈತರು ತಮ್ಮ ಕೃಷಿ ಚಟುವಟಿಕೆಗಳಿಗಾಗಿ ಬಳಸಿದ ನೇಗಿಲಿನ ಮೊನಚನ್ನು (ಲೋಹದ ತುಣುಕನ್ನು) ಸಂಗ್ರಹಿಸಲು ಪ್ರತೀ ರಾಜ್ಯದಲ್ಲಿ ರಾಜ್ಯ ಸಮಿತಿಗಳನ್ನು ರಚಿಸಲಾಗಿದೆ. ಸಂಗ್ರಹ ವಾದ ಲೋಹವನ್ನು ಅಗತ್ಯ ರೀತಿಯಲ್ಲಿ ಉಪಯೋಗಿಸಿ ಈ ಏಕತಾ ಪ್ರತಿಮೆ ನಿರ್ಮಾಣಗೊಳ್ಳಲಿದೆ. ಈ ಲೋಹ ಸಂಗ್ರಹದ ಜೊತೆಗೆ ದೇಶದ ಪ್ರತೀ ಗ್ರಾಮದಿಂದ ಒಂದು ಹಿಡಿಯಷ್ಟು ಮಣ್ಣನ್ನು ಸಂಗ್ರಹಿಸಿ, ಈ ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗುವುದು. ಲೋಹಸಂಗ್ರಹ ಕಾರ್ಯಕ್ಕಾಗಿ ಈಗಾಗಲೇ ಏಕತೆಯ ಸಂದೇಶ ಹೊತ್ತ ಸುಮಾರು 700 ಟ್ರಕ್‌ಗಳು ವಿವಿಧ ರಾಜ್ಯಗಳಿಗೆ ತೆರಳಿವೆ.

ಲೋಹಸಂಗ್ರಹದ ಕಾರ್ಯಕ್ಕಾಗಿ ಗ್ರಾಮಗಳಿಗೆ ಭೇಟಿ ನೀಡಿದಾಗ ಆ ಗ್ರಾಮದ ಮುಖ್ಯ ಸರಪಂಚ್ ಅಥವಾ ಅಧ್ಯಕ್ಷನ ಫೋಟೋ ಮತ್ತು ಗ್ರಾಮದ ಕಿರುಚರಿತ್ರೆವನ್ನು ಸಂಗ್ರಹಿಸಿ ಒಂದು ಬೃಹತ್ ಡಿಜಿಟಲ್ ಕೊಲಾಜ್‌ನ್ನು ರಚಿಸಲು ನಿರ್ಧರಿಸಲಾಗಿದೆ. ಇವೆಲ್ಲವನ್ನು ಸಂಗ್ರಹಾಲಯದಲ್ಲಿ ಸಾರ್ವಜನಿಕ ಪ್ರದರ್ಶನಕ್ಕಿಡಲಾಗುವುದು. ಅಂದರೆ ಪ್ರತಿಮೆಯ ನಿರ್ಮಾಣದೊಂದಿಗೆ ಇಡೀ ದೇಶದ ಗ್ರಾಮ ಗ್ರಾಮವನ್ನು ಬೆಸೆಯುವ ಶ್ರೇಷ್ಠ ಕಾರ್ಯವೂ ಆಂದೋಲನದ ಭಾಗವಾಗಿದೆ. ಏಕತಾ ಪ್ರತಿಮೆಯ ಆಂದೋಲನದ ಅಂಗವಾಗಿ ಸರ್ದಾರ್ ಪಟೇಲರ ಜನ್ಮದಿನ ಡಿಸೆಂಬರ 15ರಂದು ದೇಶದ 565ಕ್ಕೂ ಹೆಚ್ಚು ಸ್ಥಳಗಳಲ್ಲಿ 'ಏಕತಾ ಓಟ' (ಖಣಟ ಜಿಂಡಿ ಗಟುಣಥಿ) ವನ್ನು ಆಯೋಜಿಸಲಾಗಿತ್ತು. ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ 40 ಲಕ್ಷಕ್ಕೂ ಹೆಚ್ಚು ಓಟಗಾರರು ತಮ್ಮ ಹೆಸರು ನೋಂದಾಯಿಸಿ ಏಕತಾ ಓಟದಲ್ಲಿ ಭಾಗವಹಿಸಿದ್ದರು. ಏಕಕಾಲದಲ್ಲಿ ಒಂದು ಉದ್ದೇಶದಿಂದ ನಡೆದ 'ಏಕತಾ ಓಟ' ವಿಶ್ವದಲ್ಲೇ ಅತಿ ದೊಡ್ಡ ಕಾರ್ಯಕ್ರಮ ಎಂಬ ದಾಖಲೆ ನಿರ್ಮಿಸಿತು. □ ಶಾಲೆ ಕಾಲೇಜು ವಿದ್ಯಾರ್ಥಿಗಳನ್ನೂ ಏಕತೆಯ ಆಂದೋಲನದಲ್ಲಿ ಬೆಸೆಯುವ ಉದ್ದೇಶದಿಂದ 'ರೈಟ್ ಫಾರ್ ಯುನಿಟಿ' ಎನ್ನುವ ಪ್ರಬಂಧ ಮತ್ತು ಘೋಷಣಾ ರಚನೆಯ ಸ್ಪರ್ಧೆ ವಿವಿಧ ಹಂತಗಳಲ್ಲಿ ದೇಶದಾದ್ಯಂತ ನಡೆಯಲಿದೆ. □ ಆಡಳಿತ ಸುಧಾರಣೆಯ ನಿಟ್ಟಿನಲ್ಲಿ ಸುಶಾಸನದ ಬೇಡಿಕೆಗಾಗಿ ಸಹಿ ಸಂಗ್ರಹ ಅಭಿಯಾನ 'ಇ–ಸುರಾಜ್' ನಡೆಯಲಿದ್ದು, 2 ಕೋಟಿಗೂ ಅಧಿಕ ಜನರು ಪಾಲ್ಗೊಳ್ಳುವ ಈ ಅಭಿಯಾನ ವಿಶ್ವದಲ್ಲೇ ಅತೀ ದೊಡ್ಡ ಸಹಿ ಸಂಗ್ರಹ ಅಭಿಯಾನವಾಗಿ ಇತಿಹಾಸ ನಿರ್ಮಿಸಲಿದೆ. ಇವಿಷ್ಟೇ ಅಲ್ಲದೇ ದೇಶಾದ್ಯಂತ ಸ್ಥಳೀಯ ಸಭೆಗಳು, ನಾಯಕತ್ವ ಅಭಿಯಾನಗಳು, ಸಂಶೋಧನೆ ಮತ್ತು ಶಿಕ್ಷಣ, ಪರಿಸರ ಕಾಳಜಿ ಇನ್ನೂ ಹತ್ತು ಹಲವು ಆಯಾಮಗಳ ಸಮಗ್ರ ಯೋಜನೆ ಏಕತಾ ಪ್ರತಿಮಾ ಆಂದೋಲನದ ಅಡಿಯಲ್ಲಿ ನಡೆಯಲಿವೆ. ಸರ್ದಾರ್ ಪಟೇಲರ ಬೃಹತ್ ಪ್ರತಿಮೆಯ ನಿರ್ಮಿತಿಯಲ್ಲಿ ಇಡೀ ದೇಶದ ಜನರನ್ನು ಜೋಡಿಸುವುದು ಮತ್ತು ರಾಷ್ಟ್ರದ ಐಕ್ಯತೆಯ ಭಾವವನ್ನು ಜಾಗೃತಗೊಳಿಸುವುದು ಭವ್ಯ ಭಾರತದ ಕನಸು ಕಂಡ ನಾಯಕನಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ. ವಿಶ್ವದ ಭೂಪಟದಲ್ಲಿ ಗೌರವನೀಯ ಸ್ಥಾನ ಪಡೆಯುವ ಏಕತಾ ಪ್ರತಿಮೆ ಭಾರತದ ಶ್ರೇಷ್ಠ ಇತಿಹಾಸ ಮತ್ತು ಮಹಾಪುರುಷರ ಆದರ್ಶ ಜೀವನದ ಪ್ರತೀಕವಾಗಲಿದೆ. ಸ್ಮಾರಕವು ನಮ್ಮ ನಾಡಿನ ಚರಿತ್ರೆಯನ್ನು ವಿಶ್ವದೆದುರಲ್ಲಿ ತೆರೆದಿಡಲಿದೆ. 'ಸ್ಟಾಚ್ಯೂ ಆಫ್ ಯುನಿಟಿ' ವಿಶ್ವದ ವಿಸ್ಮಯ ಪ್ರವಾಸೀ ಕೇಂದ್ರವಾಗುವುದರ ಜೊತೆಗೆ ಭಾರತೀಯರಿಗೆ ರಾಷ್ಟ್ರೀಯತೆ ಮತ್ತು ದೇಶಭಕ್ತಿಯ ಪ್ರೇರಣಾ ಸ್ರೋತವಾಗಲಿದೆ. ■

# ಬಂಟ್ವಾಳ ತಾಲೂಕು ಮಾತೃಶಕ್ತಿ ಸಂಗಮ 29-12-2013




ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದ ಮೈದಾನದಲ್ಲಿ ಸ್ವಾಮಿ ವಿವೇಕಾನಂದರ 150ನೇ ಜಯಂತ್ಯುತ್ಸವ ಪ್ರಯುಕ್ತ ದಿನಾಂಕ 29–12–2013ರ ಭಾನುವಾರದಂದು ಏರ್ಪಡಿಸಲಾಗಿದ್ದ ಬಂಟ್ವಾಳ ತಾಲೂಕು ಮಾತೃಶಕ್ತಿ ಸಂಗಮವನ್ನು ಒಡಿಯೂರು ಕ್ಷೇತ್ರದ ಶ್ರೀಮಾತಾನಂದಮಯೀ ಉದ್ಘಾಟಿಸಿ ಬೃಹದಾಕಾರವಾದ ವೃಕ್ಷ ಗಟ್ಟಿಯಾಗಿ ನಿಲ್ಲಲು ತಾಯಿಬೇರು ಆಧಾರವಾಗಿರುವಂತೆ ಕುಟುಂಬಕ್ಕೆ ಕೇಂದ್ರವಾಗಿರುವ ತಾಯಿ ಮನೆಗೆ ಆಧಾರ ಸ್ತಂಭವಾಗಿದ್ದಾರೆ. ಇಂದು ಸಾಮಾಜಿಕವಾಗಿ ಕಾಣುತ್ತಿರುವಂತಹ ಅನೇಕ ಅನಿಷ್ಟಗಳನ್ನು ದೂರ ಮಾಡಲು ಮಾತೃಶಕ್ತಿ ಜಾಗೃತವಾಗಬೇಕು. ಎಂದು ಆಶೀರ್ವಚನ ನೀಡುತ್ತಾ ಹೇಳಿದರು.



ಶ್ರೀಮತಿ ಅಲಕಾ ಇನಾಂದಾರ್

ಜಾಗತೀಕರಣದಿಂದಾಗಿ ವಿಶ್ವ ಭೌತಿಕತೆಯ ಪ್ರಭಾವದಿಂದ ಒಳಗಾಗಿದ್ದರೂ ಭಾರತೀಯ ತಾಯಂದಿರಲ್ಲಿರುವ ಆಧ್ಯಾತ್ಮಿಕ ಶಕ್ತಿಯೇ ನಮ್ಮ ದೇಶದ ಸಂಜೀವಿನಿಯಾಗಿದ್ದಾರೆ. ಮಾತೆಯರು ದೈವೀ ಸ್ವರೂಪಿಯರು. ಲಕ್ಷ್ಮೀ, ಶಾರದೆ, ಸರಸ್ವತಿಯಂತೆ ಇದ್ದರೂ ಸಂದರ್ಭ ಬಂದಾಗ ಚಂಡಿಚಾಮುಂಡಿ ದುರ್ಗೆಯಂತೆ ದುಷ್ಟಸಂಹಾರ ಮಾಡುವಂತೆ ಸಿದ್ಧರಾಗಬೇಕು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಮನೆಯಲ್ಲಿ ತಾಯಿ ಗುರುವಿನ ಸ್ಥಾನವನ್ನು ನಿರ್ವಹಿಸಬೇಕು. ಮನೆಯನ್ನು ಮುನ್ನಡೆಸುವ ಸಾರಥಿಯಾಗಬೇಕು. ರಾಷ್ಟ್ರೀಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ರಾಷ್ಟ್ರಸೇವಿಕಾ ಸಮಿತಿಯ ಮುಖ್ಯಸ್ಥೆ ಅಲಕಾ ಇನಾಂದಾರ್ ಹೇಳಿದರು.

ನ್ಯಾಯವಾದಿ ಆಶಾಪ್ರಸಾದ್ ಸ್ವಾಗತಿಸಿ, ರೇಷ್ಮಾ ಕೋಡಪದವು ವಂದಿಸಿದರು. ಸುಧಾ ಕಶೆಕೋಡಿ ನಿರೂಪಿಸಿದರು.

ಸಮಾರೋಪ ಸಮಾರಂಭ (ಸಂಕಲ್ಪ ಸಂಗಮ)ದ ದಿಕ್ಸೂಚಿ ಭಾಷಣವನ್ನು ಮಂಗಳೂರು ಸಹವಿಭಾಗ ಪ್ರಚಾರಕ್ (ರಾ.ಸ್ವ.ಸಂ.) ಶ್ರೀ ಪ್ರದೀಪ್ ಇವರು ನಡೆಸಿಕೊಟ್ಟರು. ಇದು ಸಮಾರೋಪವಲ್ಲ, ಕಾರ್ಯದ ಆರಂಭ. ಇಂದಿನ ಬಹುಮುಖ್ಯ ಅವಶ್ಯಕತೆ ಎಂದರೆ ವೈಚಾರಿಕವಾಗಿ ನಾವು ದೃಢಗೊಂಡು ಕಾರ್ಯಪ್ರವೃತರಾಗುವುದೇ ಆಗಿದೆ ಎಂದರು.



ಶ್ರೀ ಪ್ರದೀಪ್


ಡಾ। ಪ್ರಭಾಕರ ಭಟ್

ಸಮಾರೋಪ ಭಾಷಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಸಂಪರ್ಕ ಪ್ರಮುಖ್ ಡಾ॥ಪ್ರಭಾಕರ ಭಟ್ ಮಾತನಾಡಿ ಹಿಂದೂ ಸಮಾಜದ ಮೇಲೆ ನಡೆಯುತ್ತಿರುವ ವಿವಿಧ ಆಕ್ರಮಣವನ್ನು ಎದುರಿಸಲು ಮಹಿಳಾಶಕ್ತಿ ಜಾಗೃತವಾಗಬೇಕು. ಸಂದರ್ಭ ಬಂದಾಗ ಎದ್ದು ನಿಂತು ಹೋರಾಡುವ ಶಕ್ತಿ ಮಹಿಳೆಯರಲ್ಲಿದ್ದು ರಾಜರಾಜೇಶ್ವರಿ, ದುರ್ಗೆಯರಾಗಬೇಕು ಎಂದು ಅಧ್ಯಕ್ಷೀಯ ಭಾಷಣದಲ್ಲಿ ಕರೆನೀಡಿದರು.

2ನೇ ಅವಧಿಯಲ್ಲಿ ಒಟ್ಟು ನಾಲ್ಕು ಗುಂಪುಗಳಲ್ಲಿ ಗುಂಪುಶಃ ಚರ್ಚೆ ನಡೆಯಿತು. ಇದನ್ನು ಡಾ। ಕಮಲಾ ಪ್ರಭಾಕರ ಭಟ್, ಶ್ರೀ ನ.ಸೀತಾರಾಮ್, ಶ್ರೀಮತಿ ಯಶೋಧಾ ರಾಮಚಂದ್ರ ಹಾಗೂ ಕಜಂಪಾಡಿ ಸುಬ್ರಹ್ಮಣ್ಯ ಭಟ್ ನಡೆಸಿಕೊಟ್ಟರು. ಕುಮಾರಿ ವಸುಧಾ ದೇಶಭಕ್ತಿಗೀತೆ ಹಾಡಿ ಮಣಿಮಾಲಾ ಬಿ.ಸಿ.ರೋಡ್ ಸ್ವಾಗತಿಸಿದರು. ಶ್ರೀಮತಿ ಭಾರತೀ ಕಾಮತ್ ಬಂಟ್ವಾಳ ವಂದನಾರ್ಪಣೆ ಮಾಡಿದರು. ಕು। ಲಾವಣ್ಯ ವಂದೇಮಾತರಂ ಹಾಡಿದರು. ಶ್ರೀಮತಿ ಶೋಭಾ ವಿ. ಶೆಟ್ಟಿ, ಶ್ರೀಮತಿ ನೇಹಾ, ಕು। ಪ್ರೀತಾ ನಿರ್ವಹಿಸಿದರು. ಬಂಟ್ವಾಳ ತಾಲೂಕಿನ ಎಲ್ಲಾ ಗ್ರಾಮಗಳಿಂದ ಸುಮಾರು 7000ಕ್ಕೂ ಹೆಚ್ಚು ಮಾತೆಯರು ಅತ್ಯಂತ ಶಿಸ್ತುಬದ್ಧವಾಗಿ ಬೆಳಗ್ಗಿನಿಂದ ಮಧ್ಯಾಹ್ನದ ವರೆಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸ್ವಾಮಿ ವಿವೇಕಾನಂದರ 150ರ ಮಹಿಳಾ ವಿಭಾಗದ ಸಂವರ್ಧಿನಿಯಿಂದ ಈ ಕಾರ್ಯಕ್ರಮದ ಆಯೋಜನೆಯಾಗಿತ್ತು.





"ಸರಯೂ" ಪತ್ರಿಕೆಯ ಬಗೆಗೆ ಹಾಗೂ ವಿದ್ಯಾಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಈ ಪತ್ರಿಕೆಯ ಪೋಷಕರಾಗಬಯಸುವವರು ರೂ. 1000/–ದ ಡಿ.ಡಿ./ಚೆಕ್‌ನ್ನು ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ಸಂಪಾದಕರು, ಸರಯೂ**
ಶ್ರೀರಾಮ ವಿದ್ಯಾಕೇಂದ್ರ, ಹನುಮಾನ್ ನಗರ, ಕಲ್ಲಡ್ಕ, ದ.ಕ.–574 222.

ಸವಿಧೇ ತೆರೆದ ಅಂಚೆ

.............................................................

.............................................................

.............................................................